ಜವಾಹರ ನವೋದಯ ವಿದ್ಯಾಲಯದಲ್ಲಿ ವಾಸುದೇವ ನಾಡಿಗ್ ಕನ್ನಡ ಅಧ್ಯಾಪಕರು. ಮೂಲತಃ, ಶಿವಮೊಗ್ಗದ ಭದ್ರಾವತಿಯವರು. ಪ್ರಸ್ತುತ ಬೆಂಗಳೂರಿನ ಕನಕಪುರದ ಬಳಿಯ ಶಾಲೆಯಲ್ಲಿ ಕರ್ತವ್ಯನಿರತರು. 'ವೃಷಭಾಚಲದ ಕನಸು', 'ಹೊಸ್ತಿಲು ಹಿಮಾಲಯದ ಮಧ್ಯೆ', 'ಭವದ ಹಕ್ಕಿ', 'ನಿನ್ನ ಧ್ಯಾನದ ಹಣತೆ', ವಿರಕ್ತರ ಬಟ್ಟೆಗಳು, 'ಅಲೆ ತಾಕಿದರೆ ದಡ', 'ಕಾಲಾಂತರಕ್ಕೊಂದು ಕನ್ನಡಿ', 'ಒಂದು ಡೈರಿಯ ಪರಿಮಳ' ಅವರ ಕೆಲವು ಕೃತಿಗಳು.

ಅತ್ಯಂತ ವಿನಯವಂತಿಕೆ ಎಂದು ತೋರಿಸಿಕೊಳ್ಳುವ ದಾಕ್ಷಿಣ್ಯ ಮನೋಭಾವ ಅವನದು. ಅಪ್ಪ ಶ್ರೀಕಾಂತನ ಮಾತಿಗೂ ಹೂಂಗುಟ್ಟುವ ಹಾಗೇ ಅಪ್ಪಟ ವಾಸ್ತವವಾದಿ ಸತ್ಯೇಂದ್ರನ ನಿಲುವನ್ನೂ ಮನ್ನಿಸುವನು. ಪ್ರೇಮದ ಇಬ್ಬಂದಿತನದ ಬಗ್ಗೆ ಸುಶೀಲೆಯೂ ಸೇರಿದಂತೆ ಅನೇಕರು ತಿಳಿ ಹೇಳಿದರೂ, ಅವನಿಗೆ ಹಳಹಳಿಕೆ ಮಾತ್ರ ತಪ್ಪಿದ್ದಲ್ಲ. 'ತಾನು ನಿರುಪಯೋಗಿ, ಹೇಡಿ, ಕೈಲಾಗದವ, ಸ್ವಂತ ನಿರ್ಧಾರಗಳ ಕೈಗೊಳ್ಳದವ, ಯಾರು ಏನೇ ಹೇಳಿ ಗಟ್ಟಿಗೊಳಿಸಿದರೂ ಕೊನೆಗೂ ತನ್ನ ಸ್ವಂತ ವಿಚಾರಗಳಲ್ಲೇ ಮೆದುಳು ಒದ್ದಾಡುತ್ತಿತ್ತು' ಎಂಬ ಹಳಹಳಿಕೆ ಬೇರೆ. ಜೋಗದ ಜಲಪಾತವನ್ನು ನೋಡಲು ಹೋದಾಗ ಕಾಮಿನಿಯ ಕೈಹಿಡಿದು ಚುಂಬಿಸಿದ್ದನ್ನು ಕೂಡಾ ತಾತ್ವಿಕವಾಗಿ ಯೋಚಿಸಿ ಕಂಗೆಡುತ್ತಿದ್ದ ಜೀವವದು.

ಇವನ ಈ ಹುಚ್ಚಾಟಗಳು ಕೆಲವೊಮ್ಮೆ ನಗು ತರಿಸುತ್ತವೆ. ಅನುಕಂಪವನ್ನು ಹುಟ್ಟಿಸುತ್ತವೆ. ಅವನ ಎಲ್ಲ ತಲ್ಲಣ, ದೌರ್ಬಲ್ಯಗಳ ಗದ್ದಲ ಯಾವುದೋ ಒಂದು ಸಾಮ್ರಾಜ್ಯವನ್ನು ಕಟ್ಟಲಲ್ಲ. ಬದಲಿಗೆ ತನಗೆ ಯಾರು ಸರಿ? ಯಾರ ಪ್ರೇಮಕ್ಕೆ ತಾನು ಅರ್ಹ? ಡಾಲಿಯೋ, ಕಾಮಿನಿಯೋ ಎಂದು ಲೆಕ್ಕಾಚಾರ ಹಾಕಲು. ಅಲ್ಲಲ್ಲಿ ಓದಿಕೊಂಡ ಸಾಹಿತ್ಯ, ಕಥನ, ಕವನಗಳನ್ನೂ ಓದುಗನಾಗಿ ಒಂದು ಅಂತರದಲ್ಲಿಟ್ಟು ಓದದೇ, ತಾನೇ ಆ ಕೃತಿಯ ಕೇಂದ್ರಬಿಂದು ಎಂದು ಭಾವಿಸುತ್ತಾನೆ. ಅದನ್ನು ಬಾಲಿಶವೆಂದು ತಳ್ಳಿಹಾಕುತ್ತಾನೆ.

ಅವನು ಡಾಲಿಯನ್ನು ಕೂಡಿದಾಗ ಕಾಮಿನಿಯನ್ನು ನೆನೆಯುತ್ತಾನೆ, ಮತ್ತು ಕಾಮಿನಿ ಎಷ್ಟೇ ಇವನನ್ನು ನಿರಾಕರಿಸಿದರೂ ಮತ್ತೆ ಮತ್ತೆ ಅವಳ ಎದುರು ಮೊಣಕಾಲೂರುತ್ತಾನೆ. 'ಡಾಲಿಯಿಂದ ನನ್ನ ವ್ಯಕ್ತಿತ್ವದ ಯಾವುದೋ ಒಂದು ಭಾಗ ಸಂಪೂರ್ಣ ತೃಪ್ತವಾಗುವುದು, ಆದರೂ ನನ್ನ ಮೂಲಭೂತ ಕೇಂದ್ರವನ್ನು ಅವಳು ಮುಟ್ಟಲಾರಳು ಎನಿಸುತ್ತದೆ. ನನಗೆ ನೀನೇ ಬೇಕು, ನೀನೇ ಬೇಕು ಎಂದು ಅವಳಿಗೆ ನನ್ನ ಆತ್ಮ ಹೇಳಲಾರದು ಏಕೆ? ಕಾಮಿನಿಯು ನನ್ನನ್ನು ತುಳಿದು ಹರಿದು ಚಿಂದಿ ಮಾಡಿ ಒಗೆದರೂ ಇನ್ನೂ ನಾನು ಅವಳಿಗೆ ಹೇಳಬಲ್ಲೆ: ನೀನೇ ಬೇಕು, ನೀನೇ ಬೇಕು. ಯಾಕೆ?' ಎಂಬ ಸಾಲುಗಳಂತೂ ಅವನ ಹಪಹಪಿತನವನ್ನು ತೋರಿಸುತ್ತದೆ. ಗೌರೀಶನ ಒಟ್ಟು ವಿಹ್ವಲತೆ ಮತ್ತು ಮುಕ್ತಿಯ ಬಯಕೆಗೆ ಇವು ಷರಾ ಬರೆದಿವೆ.

ಡಾಲಿ ಮತ್ತು ಶ್ರೀಕಾಂತನ ಮಾತಿನ ಹಾಗೆ, ಈ ಗೌರೀಶ ಸರಳ ಮಳ್ಳ ಹುಡುಗ. ಕಾಮಿನಿಯ ಪಾಲಿಗೆ ಒಂದು ಆಟಿಕೆ, ಸತ್ಯೇಂದ್ರನ ಪಾಲಿಗೆ ಪೆನ್ನು, ನೋಟ್ ಬುಕ್ ಹಿಡಿದು ಕೂಡುವ ವಿದ್ಯಾರ್ಥಿ, ಶಶಿಕಲೆಯ ಪಾಲಿಗೆ ಒಬ್ಬ ಉದಾತ್ತ ಮಾದರಿ ವ್ಯಕ್ತಿತ್ವ, ಸುಶೀಲೆ ರೋಹಿಣಿಯರ ಪಾಲಿಗೆ ಜಗತ್ತಿನ ಸಂಕಟ ವಿಷಾದವನ್ನೆಲ್ಲ ಹೊತ್ತು ತಿರುಗುವ ಅಲೆಮಾರಿ... ಇವೆಲ್ಲದರ ಆಚೆಗೆ ಗೌರೀಶ ನನಗೆ ಒಂಟಿ ದ್ವೀಪದ ಮೌನಿಯ ತರಹ ಕಾಣುತ್ತಾನೆ. ಇನ್ನೊಬ್ಬರ ಸಹಾನುಭೂತಿಗಳಲ್ಲೇ ವಾಸಿಸುವ ಜೀವ ಅನಿಸುತ್ತದೆ.

ಇಷ್ಟೆಲ್ಲದರ ಹೊರತಾಗಿಯೂ, ಗೌರೀಶ ಒಬ್ಬ ನಿರುಪದ್ರವಿ ಮತ್ತು ಚಾಂಚಲ್ಯದ ದಾಕ್ಷಿಣ್ಯ ಮೂರ್ತಿ. ಯಾರ ಮನಸನ್ನೂ ನೋಯಿಸಬಾರದು, ಎಲ್ಲರ ಮಾತನ್ನೂ ಒಪ್ಪಬೇಕು ಎಂಬ ಅತೀ ವಿನಯವಂತಿಕೆಯ ಸ್ವಭಾವ. ಎಲ್ಲ ತರಾವರಿ ಬಾಳ ಕಡಲ ಅಲೆಗಳ ಹೊಡೆತಕ್ಕೆ, ಪುಳಕಕ್ಕೆ, ಭಯಕ್ಕೆ, ದಡದ ಒಂದು ಕಂಬಕ್ಕೆ ಒಂಟಿಕಾಲಿನಲ್ಲಿ ಒರಗಿ ನಿಂತ ಅತಿ ಭಾವುಕ ಜೀವಿ ಅನಿಸುತ್ತದೆ. ಮುಟ್ಟಿ, ಹೆಗಲ ಮೇಲೆ ಕೈಹಾಕಿ ಮಾತಾಡಿಸಿದರೆ ಎದೆಗೆ ಅಂಟಿಕೊಳ್ಳುವ ಹಸಿರು ಹೂವಿನಂತೆ ಮತ್ತು ದಣಿದು ಅಮ್ಮನ ಮಡಿಲು ಸೇರುವ ಮಗುವಿನಂತೆ ಅವನು. ●